**ಅಧಿಕ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ ನ್ಯಾಯಾಲಯ, ಗುಬ್ಬಿ**

**ದಿನಾಂಕಃ 30.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ . ಸಿ.ಎಸ್.ಎ. ವಕೀಲರಿಂದಃ**

ನಾನು 1994-95 ರಿಂದ ಪತ್ರಬರಹಗಾರನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಒಂದುಪತ್ರ ಬರೆದ ನಂತರ ಸುಮಾರು 10 ವರ್ಷಗಳು ಕಳೆದ ನಂತರ ಅದನ್ನು ಯಾರು ಯಾರಿಗೆ ಬರೆದುಕೊಟ್ಟಿರುತ್ತಾರೆ ಮತ್ತು ಅದರ ವ್ಯವಹಾರ ನನಗೆ ನೆನಪಿರುವುದಿಲ್ಲ ಎಂದರೆ ಸರಿ . ಸಾಕ್ಷಿ ಮುಂದುವರಿದು ಪತ್ರ ನೋಡಿದರೆ ನಾನು ಹೇಳಬಲ್ಲೆ ಎನ್ನುತ್ತಾರೆ. ನಿ.ಪಿ.1 ಅನ್ನು ವಾದಿ ಬಂದು ನೀಡಿದ ಮಾಹಿತಿಯ ಮೇರೆಗೆ ಮತ್ತು ದಾಖಲಾತಿಗಳ ಮೇರೆಗೆ ಬರೆದಿರುತ್ತೇನೆ. ನಿ.ಪಿ.1 ಅನ್ನು ನೊಂದಣಿಗಾಗಿ ವಾದಿಯೇ ಹಾಜರುಪಡಿಸಿರುತ್ತಾರೆ. ನಿ,ಪಿ.1 ಅನ್ನು ಬರೆದು ಸುಮಾರು 13 ವರ್ಷಗಳು ಕಳೆದಿರುವುದರಿಂದ ಅದರ ಮೇಲಿರುವ ಸಹಿಗಳನ್ನುಗುರುತಿಸುವುದು ಕಷ್ಟ ಎಂದರೆ ಸಾಕ್ಷಿ ನನ್ನ ಸಹಿಗಳನ್ನು ಮಾತ್ರ ಗುರುತಿಸಬಲ್ಲೆ ಎನ್ನುತ್ತಾರೆ. ನಿ.ಪಿ.1 ಅನ್ನು ನಾನು ತಯಾರು ಮಾಡಿ ಅದಕ್ಕೆ ಬಿಕ್ಲಂದಾರನಾಗಿ ಸಹಿ ಮಾಡಿರುತ್ತೇನೆ , ನೊಂದಣಿಯನ್ನು ವಾದಿಯೇ ಮಾಡಿಸಿಕೊಂಡಿರುತ್ತಾರೆ. ನಿ.ಪಿ.1 ಕ್ಕೆ ಸಂಬಂಧಿಸಿದಂತೆ ನಡೆದಿರುವ ವ್ಯವಹಾರದ ಬಗ್ಗೆ ನನಗೆ ಏನೂ ತಿಳಿಯದೇ ಇದ್ದರೂ ವಾದಿಯ ಮಾತಿನ ಮೇರಗೆ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಅಧಿಕ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್ ಸಿ , ಗುಬ್ಬಿ.**